


ಒಪ್ಪಿದವರು ಬೇರೆಯವರನ್ನು ಒಪ್ಪುವುದಿಲ್ಲ ಎಂಬಂತೆ. ಅವಿಚಾರಿತವಾಗಿ ಎಲ್ಲಿಂದ ಸ್ವೀಕರಿಸಿದರೂ ತಪ್ಪು.

◆ **ನೀವು ಪ್ರಾಚೀನ ಕನ್ನಡ ಸಾಹಿತ್ಯದ ಬಗ್ಗೆಯೂ ಬರೆದಿದ್ದೀರಿ. ಆಧುನಿಕ ಕನ್ನಡ ಸಾಹಿತ್ಯದ ವಿಮರ್ಶೆಯನ್ನೂ ದೊಡ್ಡ ಪ್ರಮಾಣದಲ್ಲಿ ಮಾಡಿದ್ದೀರಿ. ಹೊಸತಲೆಮಾರಿನ ಲೇಖಕರನ್ನೂ ನಿರಂತರವಾಗಿ ಓದಿ ವಿಮರ್ಶಿಸಿದ್ರಿ. ಈ ಕಾಲದಿಂದ ದೂರ ಇರುವ ಲೇಖಕರಿದ್ದಾರಲ್ಲ – ಅಂದ್ರೆ ಪಂಪ, ರನ್ನ, ಕುಮಾರವ್ಯಾಸ, ವಚನಕಾರರು ಇತ್ಯಾದಿ. ಅಂದ್ರೆ ನಮ್ಮ ದೇಶ–ಕಾಲದಿಂದ ದೂರವಿರುವ ಲೇಖಕರನ್ನು ಮತ್ತು ನಿಮ್ಮ ಸಮಕಾಲೀನ ಲೇಖಕರನ್ನು ವಿಮರ್ಶೆ ಮಾಡುವಾಗ ಇರುವ ಅನುಕೂಲ ಮತ್ತು ಅನನುಕೂಲಗಳನ್ನು ಒಬ್ಬ ವಿಮರ್ಶಕರಾಗಿ ನೀವು ಹೇಗೆ ಎದುರಿಸಿದ್ರಿ? ಏಕೆಂದರೆ, ಪ್ರಾಚೀನ ಸಾಹಿತ್ಯ ಕುರಿತು ನೀವು ಬರೆದ ವಿಮರ್ಶೆಗಳನ್ನು ಓದುವಾಗ ಒಂದು ರೀತಿಯ ಮುಕ್ತತೆ ಎದ್ದು ಕಾಣುತ್ತದೆ. ಅದೇರೀತಿ ಸಮಕಾಲೀನರನ್ನು ವಿಮರ್ಶಿಸುವಾಗ ಒಂದು ರೀತಿಯ ಓವರ್‌ಕಾನ್ಶಿಯಸ್ ಆಗಿದ್ದಂತೆ ಕಾಣುತ್ತದೆ.**

ತುಂಬಾ ಕುತೂಹಲಕರವಾದ ಪ್ರಶ್ನೆ ಇದು. ಇಂತಹ ಕಡೆ ಅನೇಕ ಅಂಶಗಳು ಪರೋಕ್ಷವಾಗಿ ಪ್ರಭಾವಿಸ್ತಾ ಇರ್ತವೆ. ಒಬ್ಬ ಲೇಖಕ ಅಥವಾ ಲೇಖಕಿ ಇವರ ಬರವಣಿಗೆಯನ್ನು ಯಾವ ಹಂತದಲ್ಲಿ ವಿಮರ್ಶಿಸ್ತಾ ಇರ್ತೀವಿ ಅನ್ನೋದು ನನಗೆ ಮುಖ್ಯ. ಹಾಗೆಯೇ ನಾವು ಯಾವ 'ಸಂಸ್ಕೃತಿ ಸಂದರ್ಭ'ದಲ್ಲಿ ಮಾತಾಡ್ತಾ ಇದ್ದೀವಿ ಅನ್ನೋದು ಕೂಡಾ ಮುಖ್ಯ. ನೀವು ಹೇಳುವ ಪ್ರಾಚೀನ ಕವಿಗಳಿದ್ದಾರಲ್ಲ, ಅವರೆಲ್ಲಾ ಕಾಲದ ಪರೀಕ್ಷೆ ದಾಟಿ ಇಲ್ಲಿಯವರೆಗೆ ಬಂದಂಥವರು. ನಮ್ಮ ಬರವಣಿಗೆ ಅವರ ಮೇಲೆ ಯಾವುದೇ ಪ್ರಭಾವ ಬೀರುವ ಸಾಧ್ಯತೆ ಇರುವುದಿಲ್ಲ. ಆಧುನಿಕ ಸಾಹಿತ್ಯದಲ್ಲಿ ಈಗಾಗಲೇ ಸಾಕಷ್ಟು ಸಾಧನೆ ಮಾಡಿರುವಂಥ ಹಿರಿಯರು ಇದ್ದಾರೆ. ಈಗ ಹೊಸದಾಗಿ ಬರೀತಾ ಇರುವವರಲ್ಲಿ ಮೊದಲ ಬಾರಿಗೆ ಬರವಣಿಗೆಯ ಅವಕಾಶವನ್ನು ಪಡೆದುಕೊಂಡು ಬಂದಿರುವಂಥ ಸಣ್ಣ ಸಮುದಾಯಗಳವರು ತುಂಬಾ ಜನ ಇದ್ದಾರೆ. ಇವರೆಲ್ಲಾ ಇನ್ನೂ 'ಆಗುತ್ತಾ' ಇರುವ ಲೇಖಕರು. ಆಗಿಹೋಗಿರುವ ಲೇಖಕರಲ್ಲ. ಇವರೆಲ್ಲರನ್ನೂ ನೋಡುವಾಗ ಸಾಹಿತ್ಯ ಕುರಿತ ನಮ್ಮ ತಿಳಿವಳಿಕೆ ಬೇರೆ ಬೇರೆ ಸ್ತರದಲ್ಲಿ ಕೆಲಸ ಮಾಡ್ತಾ ಇರ್ತದೆ. ಪಂಪನನ್ನು ವಿಮರ್ಶಿಸುವಾಗ ಬಳಸಿದ ದೃಷ್ಟಿಕೋನಗಳನ್ನ ಹೊಸ ತಲೆಮಾರಿನವರನ್ನು ನೋಡುವಾಗ ಬಳಸಲು ಆಗುವುದಿಲ್ಲ. ಹೊಸಬರ ಶಕ್ತಿ ಮತ್ತು ಮಿತಿಗಳನ್ನು ನೋಡಲು ನಾನು ಬೇರೆಯದೇ ಆದ ಸಾಹಿತ್ಯಿಕ ತಿಳಿವಳಿಕೆಯನ್ನು ಬಳಸ್ತಾ ಇರ್ತೇನೆ.